# ವಿದುರನ ಭಾಗ್ಯವಿದು ಪದುಮಜಾಂಡ

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 21.
2. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 83.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 515.
4. **Note:** The wordings given without highlights are as per Ref. 1. The lyrics as per Ref. 2 are similar to Ref. 1 except few differences are given in yellow highlights.
5. **Ref.:** The lyrics (given in green highlights) are as per Ref. 3. They are different from Ref. 2 and Ref. 3. Singer has followed wordings as in Ref. 3.

ರಾಗ: ನಾದನಾಮಕ್ರಿಯೆ ತಾಳ: ಆದಿ

ವಿದುರನ ಭಾಗ್ಯವಿದು
ಪದುಮಜಾಂಡ ತಲೆದೂಗುತಲಿದೆಕೋ ॥ ಪ ॥

ಕುರು ರಾಯನು ಖಳನನುಜನು ರವಿಜನು
ಗುರು ಗಾಂಗೇಯರು ಎದುರಿರಲು (ಬೆರಗಾಗೆ)
ಹರಿಸಿ ರಥವ ನಡು ಬೀದಿಯಲ್ಲಿ ಬಹ
ಹರಿಯ ತಾನು ಕಂಡನು ಹರುಷದಲಿ ॥ ೧ ॥

ದಾರಿಯಲಿ ಬಹ ಮುರವೈರಿಯ ಕಾಣುತ
ಹಾರುತ ಚೀರುತ ಕುಣಿಯುತಲಿ
ವಾರಿಧಾರೆಯನು ನೇತ್ರದಿ ಸುರಿಸುತ
ಬಾರಿಬಾರಿಗೆ ಹಿಗ್ಗುವ ಸುಖದಿ ॥ ೨ ॥

ಆಟಕೆ ಲೋಕಗಳೆಲ್ಲ ಸೃಜಿಸುವ
ನಾಟಕಧರ ತನ್ನ ಲೀಲೆಯಲಿ
ನೀಟಾದವರ ಮನೆಗಳ ಜರೆದು
ಕುಟೀರದಲಿ ಬಂದು ಕುಳಿತ ಹರಿ ॥ 3 ॥

ಅಡಿಗಡಿಗೆ ತನ್ನ ತನುಮನ ಹರಹಿ
ಅಡುಗೆಡೆಯುತ ಬಲು ಗದ್ಗದದಿ (ಅಡಿಗೆರಗುತ ಗದ್ಗದ ಸ್ವರದಿ)
ನುಡಿಗಳ ತೊದಲಿಸಿ ರೋಮವ ಪುಳಕಿಸಿ (ನುಡಿಗಳು ತೊದಲಲು ರೋಮವು ಪುಳಕಲು)
ದುಡುದುಡು ಓಡುತ ದಶದಿಶೆಗೆ ॥ ೪ ॥

ಕಂಗಳುದಕದಿ ಪದಂಗಳ ತೊಳೆದು
ಗಂಧವ ಪೂಸಿದ ತನು ವೊರಸಿ (ಮೆರೆದು)
ಮಂಗಳ ಮಹಿಮನ ಚರಣಕ್ಕೆರಗಿ ಪು-
ಷ್ಪಂಗಳಿಂದ ಪೂಜೆಯ ಮಾಡಿದನು ॥ ೫ ॥

ನೋಡಿದ ಭಕುತನ ಮನದ ಹವಣಿಕೆಯ
ಪಾಡುವ ಪೊಗಳುವ ಹರುಷದಲಿ
ನೀಡಿದ ಕರದಲಿ ಬಿಗಿದಪ್ಪಿದ ಕೊಂ -
ಡಾಡಿದ ಕರುಣದಿ ಜಗದೊಡೆಯ ॥ ೬ ॥

ಕ್ಷೀರವಾರಿಧಿ ಶಯನಗೆ ವಿದುರನು
ಕ್ಷೀರವನುಣ ಬಡಿಸಿದ ನೋಡಾ
ವಾರಿಜನಾಭನು ಕರಸಂಪುಟದಲಿ
ಆರೋಗಣಿಸಿದ ಘನತೆಯನು ॥ ೭ ॥

ಒಂದು ಕುಡಿತೆ ಪಾಲು ಹರಿ ತಾ ಸವಿದು
ಮುಂದಕೆ ನಡೆಸಿದ (ಹರಿಸಿದ) ಧರೆಮೇಲೆ
ಇಂದಿರೆಯರಸನ ಚರಿತೆ ವಿಚಿತ್ರವು
ಚೆಂದದಿ ಹರಿದುದು ಬೀದಿಯಲಿ ॥ ೮ ॥

ದೊರೆ ನಿಮ್ಮ ಕರೆಸಿದ ಬರಬೇಕು ಎನ್ನಲು
ಹರಿಯು ನಸುನಗುತಲಿ ಹೊರಗೆ ಹೊರಟ

ಧರೆಗುಂಗುಷ್ಠವನೂರಲು ರಾಜರು
ಉರುಳಿಬಿದ್ದರು ಪಾದದ ಮೇಲೆ || ೮ ||

ಕರುಣಾಕರ ಸಿರಿಹರಿ ತನ್ನ ಭಕುತರ
ಪೊರೆವನು ಅನುದಿನ ಆಯತದಿ (ನಿರುತ್ತದೆ ಪೊರೆವನು ಆಯತದಿ)
ಸಿರಿಯ ಅರಸು ನಮ್ಮ ಪುರಂದರ ವಿಠಲನ
ಶರಣರು ಧನ್ಯರು ಧರೆ ಮೇಲೆ || ೯ ||

**Ref.:** The below lyrics (given in green highlights) are as per the singer. These lyrics are also available in different websites.

ವಿದುರನ ಭಾಗ್ಯವಿದು
ಪದುಮಜಾಂಡ ತಲೆದೂಗುತಲಿದೆಕೋ || ಪ ||

ಕುರು ರಾಯನು ಖಳನನುಜನು ರವಿಜನು
ಗುರು ಗಾಂಗೇಯರು ನೋಡುತಿರೆ
ಹರಿಸಿ ರಥವ ನಡೆಸುತ ಹರಿ ಬೀದಿಲಿ
ಬರುತಿರೆ ಜನರಿಗೆ ಸೋಜಿಗವೆನಿಸುತ || 1 ||

ಹೃದಯದೊಳಗೆ ನೆಲೆಗೊಂಡಿಹ ಹರಿಯನು
ಎದುರಲಿ ಕಾಣುತ ವಿದುರನು ತಾ
ಸದನವ ನೂಕುತಲಾಕ್ಷಣ ಬೀದಿಗೆ
ಮುದದಿಂದಲಿ ಕುಣಿದಾಡುತ ಬಂದನು || 2 ||

ದೂರದಲಿಹ ಶ್ರೀಶನ ನೋಡುತ ಬಹು
ಹಾರುತ ಚೀರುತ ಮೈಮರೆದು
ವಾರಿಧಾರೆಯನು ನೇತ್ರದಿ ಸುರಿಸುತ
ಬಾರಿ ಬಾರಿ ಬಲು ಹಿಗ್ಗುವ ಮನದಲಿ || 3 ||

ಅಡಿಗಡಿಗೆ ತನುಗೆಡವುತಲೇಳುತ
ದೃಢ ಭಕುತಿಯಲಿ ಗದ್ಗದ ಸ್ವರದಿಂ
ನುಡಿಗಳು ತೊದಲುತ ರೋಮ ಪುಳಕಿತದಿ

ದುಡುದುಡು ಓಡಾಡುವ ದಶದಿಶೆಯಲಿ || 4 ||

ಹಾಡುವ ಹಾರುವ ಚೀರುವುದೆಲ್ಲನು
ನೋಡಿ ನಗುತಲಿರೆ ಮಾಧವನು
ನೀಡುತ ಕರವ ಪಿಡಿದು ಬಿಗಿದಪ್ಪಿ ಕೊಂ-
ಡಾಡುತ ಬಹಳ ಯಮಾಂಶನನು || 5 ||

ಒಲ್ಲನು ಕುಜನರ ಸೇವೆಯೆಂಬ ನುಡಿ
ಸಲ್ಲಿಸುವುದಕಾ ಸಮಯದಲಿ
ಮಲ್ಲ ವಿದುರನಾ ಕುತ್ಸಿತ ಕುಟೀರ-
ದಲ್ಲಿ ಬಂದು ಕುಳಿತನು ಇದೇ ಸಾಕ್ಷಿಯು || 6 ||

ಶ್ರೀನಿವಾಸ ಮಂದಿರದೊಳು ಬರ-
ಲಾನಂದಾಬ್ಧಿಯೊಳೀಸುತಲೆ
ಏನೆಂಬೆನು ಸುಕೃತವೇನೊದಗಿತೊ
ತಾನೆ ಬಂದು ಬಹು ವಿಚಿತ್ರವೆನುತಲಿ || 7 ||

ಗಂಗೋದಕದಲಿ ಪದಯುಗ್ಮವ ತೊಳೆ-
ದಂಗಕೆ ಪೂಸಿ ಸುಗಂಧವನು
ಮಂಗಳಕರ ಪುಷ್ಪಂಗಳ್ ಸಮರ್ಪಿಸಿ
ಕಂಗಳ ದಣಿದಣಿ ನೋಡುತ ಮೂರ್ತಿಯ || 8 ||

ವಾರಿಧಿ ಮನೆಯಾದಖಿಲೇಶಗೆ ಗೋ-
ಕ್ಷೀರ ಸ್ವಲ್ಪ ಕೊಡಲಾದರದಿ
ವಾರಿಜಾಕ್ಷ ಕರ-ಸಂಪುಟದಿ ಕುಡಿದು
ನೀರಂದದಿ ಹರಿಸಿದ ಬೀದಿಯೊಳಗೆ || 9 ||

ಒಂದು ಕುಡುತೆ ಪಾಲಿಗೆ ಹಳ್ಳಾಯಿತು
ಮಂದರಧರನ ಮಹಾತ್ಮೆಯನು
ಇಂದಿರೆಗಸದಳ ಚಿಂತಿಸಲೆಂದಿಗು
ಮಂದನು ಬಲ್ಲನೆ ಎಂದು ಪೊಗಳುತಿಹ || 10 ||

ಸುರರಾಕಾಶದಿ ನೆರೆದು ನೋಡಿ ಬಲು-
ಹರುಷದಿ ವಿದುರನ ಪೊಗಳುವರು
ಸಿರಿದೇವಿಯರಸ ಪುರಂದರ ವಿಠಲನ
ಶರಣರೆ ಧನ್ಯರು ಧನ್ಯರು ಧರೆಯೊಳು || 11 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಪಾಂಡವರ ರಾಯಭಾರಿಯಾಗಿ ಕೃಷ್ಣನು ಹಸ್ತಿನಾವತಿಗೆ ಬಂದಾಗ ರಾಜಾತಿಥ್ಯವನ್ನು ತಿರಸ್ಕರಿಸಿ ದಾಸೀ ಪುತ್ರನಾದ ವಿದುರನ ಮನೆಯಲ್ಲೇ ತಂಗಿದ್ದ ಸಂದರ್ಭ (ಮಹಾಭಾರತ, ಉದ್ಯೋಗಪರ್ವ, 91) ವಿದುರನು ಪಾಂಡವ ಪಕ್ಷಪಾತಿಯಾಗಿದ್ದವನು, ಧರ್ಮಪರ. ಅವನಿಗೆ ಪಾಂಡವ ಕೌರವರ ನಡುವೆ ಯುದ್ಧ ನಡೆಯುವುದು ಬೇಸರವನ್ನು ತಂದಿದ್ದಿತು.

**ಕುರುರಾಯ** – ದುರ್ಯೋಧನ.

**ಖಳನನುಜ** – ದುಃಶಾಸನ.

**ರವಿಜ** – ಕರ್ಣ.

**ಗಾಂಗೇಯ** – ಭೀಷ್ಮ.

**ನೀಟಾದವರ** – ಸತ್ಕುಲಪ್ರಸೂತರೆಂದು ಹೆಸರಾದವರ.

**ತನು ಮರೆದು** – ಮೈಮರೆತು.

**ಧೊರೆ...** – ಕೃಷ್ಣನು ವಿದುರನ ಮನೆಯಲ್ಲಿ ಉಂಡನೆಂಬುದನ್ನು ಕೇಳಿ ಸಿಟ್ಟಿಗೆದ್ದ ಅರಸನಾದ ದುರ್ಯೋಧನನು ಅವನನ್ನು ಕರೆಕಳುಹಿಸಿ, ಕೃಷ್ಣನು ಸಭಾ ಭವನಕ್ಕೆ ಬಂದಾಗ ತಾನು ಸಿಂಹಾಸನದಿಂದ ಏಳದೆ ಅವನನ್ನು ಅಸಡ್ಡೆಯಿಂದ ಕಂಡು ಅವಮಾನಪಡಿಸಲೆತ್ನಿಸಿದನು. ಕೃಷ್ಣನು ನಸುನಗುತ್ತ ತನ್ನ ಕಾಲ ಹೆಬ್ಬೆರಳನ್ನು ಭೂಮಿಯ ಮೇಲೆ ಒತ್ತಲು, ಸಿಂಹಾಸನವು ಅಲುಗಾಡಿ ದುರ್ಯೋಧನನು ಕೆಳಗೆ ಬಿದ್ದು ಭಂಗಪಟ್ಟನು.

**ಪದುಮಜಾಂಡಾ** = ಬ್ರಹ್ಮಾಂಡ

**ಗುರು** = ದ್ರೋಣಾಚಾರ್ಯ

**ವಾರಿಧಾರೆ** = ಕಣ್ಣೀರು

**ನೀಟಾದವರು** = ಸಿರಿವಂತರು

**ಕುಟೀರ** = ಗುಡಿಸಿಲು

**ಭಕ್ತನ ಉತ್ಕಟತೆಯ ಅನುಭಾವಗಳು** = ಉತ್ಸಾಹ, ಗದ್ಗದ, ರೋಮಾಂಚನ

**ನೀಡು** = ಚಾಚು

**ಕರಸಂಪುಟ** = ಬೊಗಸೆ

**ಆರೋಗಣಿಸು** = ಸೇವಿಸು

**ಕುಡಿತೆ** = ಸೇರೆ

**ಆಯತದಿ** = ಸಹಜವಾಗಿ, ಸುಲಭವಾಗಿ, ಸರಿಯಾಗಿ, ಕ್ರಮವರಿತು.

**Classification:** Keerthane
**Ankita:** purandara vittala
**Location:** NA
**Category:** Bhakti, Mahatmya Gnyana
**Sub-Category:** vidura, Bhagya, kaurava, bhishma, shatru, sukha, loka, Krishna, kannu, pushpa, puje, Ananda, jaga, ksheera, Samudra, karuna, arasa, sharana, Dhyana, bhumi,
**Pravachana:** NA
**Explanation:** NA